UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
22-07-2026
Wednesday

ಯುವಜನತೆಗೆ ಸಹಾಯಕ ಮಹಾನಿರ್ದೇಶಕಿ ಸೀಮಾ ಜಗ್ಗಿ ಸಲಹೆ
ಸಂಶೋಧನೆಗೆ ಹೆಚ್ಚಿನ ಉತ್ತೇಜನ ನೀಡಿ



• ಬೆಂಗಳೂರು: ಕೃಷಿ ಎಂದರೆ ಕೇವಲ ಬೆಳೆ ಬೆಳೆಸುವುದು ಮಾತ್ರವಲ್ಲ, ಅವಕಾಶಗಳನ್ನು ಬೆಳೆಸುವುದು. ಇಂದಿನ ಯುವ ಜನತೆ ಸಂಶೋಧನೆಗಳ ಬಗ್ಗೆ ಹೆಚ್ಚು ಒತ್ತು ನೀಡಿ, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವತ್ತ ಹೆಚ್ಚು ಗಮನಹರಿಸಬೇಕು ಎಂದು ಹೊಸದಿಲ್ಲಿಯ ಭಾರತೀಯ ಕೃಷಿ ಸಂಶೋಧನ ಮಂಡಳಿಯ ಸಹಾಯಕ ಮಹಾನಿರ್ದೇಶಕಿ ಡಾ.ಸೀಮಾ ಜಗ್ಗಿ ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯ ವತಿಯಿಂದ ಇಂದಿನಿಂದ ಜು.24ರ ವರೆಗೆ ಹಮ್ಮಿಕೊಂಡಿರುವ ಸ್ನಾತಕೋತ್ತರ ವಿದ್ಯಾರ್ಥಿ ಸಪ್ತಾಹ-2026 ಉದ್ಘಾಟನೆ ಅವರು, ವಿಜ್ಞಾನ ಸಪ್ತಾಹವು ಸಂಶೋಧನೆಯ ಮೂಲಭೂತ ಹಾಗೂ ಅನ್ವಯಿಕ ಆಯಾಮ ಗಳೆರಡನ್ನೂ ಪರಿಚಯಿಸುವುದರ ಜೊತೆಗೆ ಪರಿಣಾಮಕಾರಿ ಸಂವಹನ ಕೌಶಲಕ್ಕೆಯನ್ನು ಸಾಧಿಸಲು ನೆರವಾಗುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಸಂಶೋಧನೆಗೆ ಉತ್ತೇಜನ ನೀಡುವ ಮಹತ್ತರ ಜವಾಬ್ದಿಯಾಗಿ ಈ ವಿಜ್ಞಾನ ಸಪ್ತಾಹ ಹೊರಹೊಮ್ಮಿದ್ದು, ವಿದ್ಯಾರ್ಥಿ ಮತ್ತು ಸಮಾಜದ ನಡುವಿನ ಬಾಂಧವ್ಯವನ್ನು ಇನ್ನಷ್ಟುಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸಂಶೋಧನೆಯಮೂಲಕ ಸಮಾಜಮುಖಿ ಅಭಿವೃದ್ಧಿಗೆ ಕೊಡುಗೆ ನೀಡುವ ನವೀನ ಆಲೋಚನೆಯ ವಿಜ್ಞಾನಿಗಳನ್ನು ರೂಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಸಾರ್ಥಕ ವೇದಿಕೆಯಾಗಲಿದೆ ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ. ಸುರೇಶ ಮಾತನಾಡಿ, ವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನಾ ಮನೋಭಾವ, ನವೋದ್ಯಮ ಹಾಗೂ ವೈಜ್ಞಾನಿಕ ಚಿಂತನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಸ್ನಾತಕೋತ್ತರ ವಿಜ್ಞಾನ ಸಪ್ತಾಹ 2026 ಆಯೋಜನೆಯಾಗುತ್ತಿದೆ. ಈ ಸಪ್ತಾಹದ ಅಂಗವಾಗಿ ವಿಶೇಷ ಉಪನ್ಯಾಸಗಳು, ವೈಜ್ಞಾನಿಕ ವಿಚಾರ ಸಂಕಿರಣಗಳು, ವಿದ್ಯಾರ್ಥಿಗಳ ಸಂಶೋಧನಾ ಪ್ರಬಂಧ ಮಂಡನೆ, ಪೋಸ್ಟರ್ ಪ್ರದರ್ಶನ, ವಿಜ್ಞಾನಸ್ಪರ್ಧೆಗಳು ಹಾಗೂ ಸಂವಾದ ಕಾರ್ಯಕ್ರಮಗಳು ನಡೆಯಲಿವೆ. ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಜ್ಞಾನ ಮತ್ತು ಸಂಶೋಧನಾ ಆಸಕ್ತಿಯನ್ನು ಹಂಚಿಕೊಳ್ಳಲಿದ್ದಾರೆ ಎಂದು ವಿಜ್ಞಾನ ಸಪ್ತಾಹದ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ಒಟ್ಟು 226 ಸ್ನಾತಕೋತ್ತರ ಸಂಶೋಧನಾ ಫಲಿತಾಂಶ ಪೋಸ್ಟರ್ ಹಾಗೂ 70 ಡಾಕ್ಟೋರಲ್ ಮೌಖಿಕ ಪ್ರಬಂಧಗಳನ್ನು ವಿದ್ಯಾರ್ಥಿಗಳು ಪ್ರಸ್ತುತ ಪಡಿಸಲಿದ್ದಾರೆ.

Hosadiganta Pg.10

ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಕೊಪ್ಪಳಾಕ್ಷರ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2026ರ ಕೃಷಿ ಮೇಳವನ್ನು ಆಯೋಜಿಸಲಿದ್ದು, ಈ ಸಿಸ್ಟಲೆಯಲ್ಲಿ ಕೃಷಿ ಪ್ರಶಸ್ತಿಗಳಿಗೆ ರೈತರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ, ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೆಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿ, ಡಾ.ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ /ರೈತ ಮಹಿಳೆ ಮತ್ತು ವಿಸ್ತರಣಾ ಕಾರ್ಯಕರ್ತರ ಪ್ರಶಸ್ತಿ, ಡಾ.ಎಂ.ಎಚ್.ಮರಿಗೌಡ ರಾಜ್ಯಮಟ್ಟದ ಅತ್ಯುತ್ತಮ ಕೊಟ್ಟಾಗಾರಿಕಾ ರೈತ/ರೈತ ಮಹಿಳೆ ಪ್ರಶಸ್ತಿ, ಬುವಾರಿ ಇಂಡಿಯಾ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತರ ಪ್ರಶಸ್ತಿಗೆ ಅರ್ಹರು ಅರ್ಜಿ ಸಲ್ಲಿಸಬಹುದು. ಜು. 31ರೊಳಗೆ ಅರ್ಜಿ ಸಲ್ಲಿಸಬೇಕು.

Hosadiganta Pg.08

ಸ್ಥಳೀಯ ಕೃಷಿ ಉತ್ಪನ್ನಗಳಿಗೆ ಸೂಕ್ತ ಮೌಲ್ಯವರ್ಧನೆಗೆ ಆದ್ಯತೆ
ನಬಾರ್ಡ್ ಸಿಎಫ್‌ಟಿಆರ್‌ಐ ಸಂಸ್ಥೆಗಳ ನಡುವೆ ಒಪ್ಪಂದ

• ಮೈಸೂರು: ಕಲ್ಯಾಣ ಕರ್ನಾಟಕ ಭಾಗದ ಕೃಷಿಕ್ಷೇತ್ರದಲ್ಲಿ ಹೊಸ ಕ್ರಾಂತಿ ಸೃಷ್ಟಿಸಲು ಹಾಗೂ ಸ್ಥಳೀಯ ಕೃಷಿ ಉತ್ಪನ್ನಗಳಿಗೆ ಸೂಕ್ತ ಮೌಲ್ಯವರ್ಧನೆ ತಂದುಕೊಡುವ ನಿಟ್ಟಿನಲ್ಲಿ ನಬಾರ್ಡ್ ಹಾಗೂ ಮೈಸೂರಿನ ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಸಂಸ್ಥೆಗಳ ನಡುವೆ ಮಹತ್ವದ ಒಪ್ಪಂದ ಏರ್ಪಟ್ಟಿದೆ.

ಈ ಯೋಜನೆಗೆ ಚಾಲನೆ ದೊರೆಯುವುದರೊಂದಿಗೆ ಗ್ರಾಮೀಣ ಭಾಗದಲ್ಲಿ ಆಹಾರ ಸಂಸ್ಕರಣಾ ಪರಿಸರ ವ್ಯವಸ್ಥೆ ಬಲಗೊಳ್ಳಲಿದ್ದು, ಕೃಷಿಕರ ಆದಾಯ ದ್ವಿಗುಣಗೊಳಿಸಲು ಮತ್ತು ಗ್ರಾಮೀಣ ಉದ್ಯಮಶೀಲತೆಗೆ ಹೊಸ ಆಯಾಮ ನೀಡಲು ಸಾಕ್ಷಿಯಾಗಲಿದೆ.

ವಿಜ್ಞಾನಿಗಳಿಂದ ರೂಪುಗೊಂಡ ಅತ್ಯಾಧುನಿಕ ಪ್ರಯೋಗಾಲಯದ ಅವಿಷ್ಕಾರಗಳು ನೇರವಾಗಿ ಗ್ರಾಮೀಣ ಮಟ್ಟಕ್ಕೆ ತಲುಪಿಸುವುದು ನಮ್ಮ ಮುಖ್ಯ ಆದ್ಯತೆಯಾಗಿದೆ. ಇದರಿಂದ ರೈತರ ಬೆಳೆಗಳಿಗೆ ಸೂಕ್ತ ಬೆಲೆ ಸಿಗುವುದಷ್ಟೇ ಅಲ್ಲದೆ, ಮಾರುಕಟ್ಟೆ ಆಧಾರಿತ ಗ್ರಾಮೀಣ ಉದ್ಯಮಗಳನ್ನು ಉತ್ತೇಜಿಸಿ ಅವರ ಜೀವನಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ.
■ ಡಾ.ಉಮೇಶ್ ಹೆಬ್ಬಾರ್, ಸಿಎಫ್‌ಟಿಆರ್‌ಐ ವಿಜ್ಞಾನಿ

ಬೆಳೆ ಜಿಲ್ಲೆಗಳಿಗೆ ತಾಂತ್ರಿಕ ಬೆಂಬಲ: ಈ ಸಹಭಾಗಿತ್ವದ ಅಡಿಯಲ್ಲಿ ಕಲ್ಯಾಣ ಕರ್ನಾಟಕದ ಹಿಂದುಳಿದ ಹಾಗೂ ಪ್ರಮುಖ ಕೃಷಿ ಆಧಾರಿತ ಏಳು ಜಿಲ್ಲೆಗಳಾದ ಬೀದರ್, ಯಾದಗಿರಿ, ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಜಿಲ್ಲೆಗಳಲ್ಲಿ ನಬಾರ್ಡ್‌ನಿಂದ ಈಗಾಗಲೇ ಸ್ಥಾಪಿಸಲಾಗಿರುವ ರೈತ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರಗಳಿಗೆ ಸಿಎಫ್‌ಟಿಆರ್‌ಐ ಸಂಸ್ಥೆ ನೇರ ತಾಂತ್ರಿಕ ಬೆಂಬಲವನ್ನು ಒದಗಿಸಲಿದೆ. ಇದರಿಂದಾಗಿ ಸುಧಾರಿತ ತಂತ್ರಜ್ಞಾನಗಳು ಪ್ರಯೋಗಾಲಯದಿಂದ ನೇರವಾಗಿ ರೈತರ ಮನೆಬಾಗಿಲಿಗೆ ತಲುಪಲಿದೆ.

ಪ್ರಯೋಜನಗಳು: ಕಲ್ಯಾಣ ಕರ್ನಾಟಕ ಭಾಗದಲ್ಲಿ ಬೆಳೆಯುವ ಪ್ರಮುಖ ಧಾನ್ಯಗಳು, ಬೇಳೆಕಾಳುಗಳು ಮತ್ತು ತೋಟಗಾರಿಕಾ ಬೆಳೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಮೌಲ್ಯವರ್ಧನೆ ಮಾಡಲಾಗುತ್ತದೆ. ಉತ್ಪನ್ನಗಳ ಬಳಕೆಯ ಅವಧಿಯನ್ನು ಹೆಚ್ಚಿಸುವುದು, ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವಂತೆ ಮಾಡಲು ಆಗತ್ಯ ತಂತ್ರಜ್ಞಾನಗಳನ್ನು ಸಿಎಫ್‌ಟಿಆರ್‌ಐ ಮಾರ್ಗದರ್ಶನ ನೀಡಲಿದೆ.

ಉತ್ಪಾದನೆಯಾಗುವ ಪ್ರತಿಯೊಂದು ಆಹಾರ ಉತ್ಪನ್ನದಲ್ಲಿ ಏಕರೂಪತೆ ಮತ್ತು ಪೌಷ್ಟಿಕ ಆಹಾರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪ್ರತಿಯೊಂದು ಸಂಸ್ಕರಣಾ ಘಟಕಕ್ಕೂ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ಸ್ ಆಧಾರಿತ ಮಾನದಂಡ ಕಾರ್ಯಚರಣೆ ವಿಧಾನಗಳನ್ನು ರೂಪಿಸಲಾಗುತ್ತದೆ.

ಸ್ಥಳೀಯ ರೈತ ಉತ್ಪಾದಕರ ಸಂಘಗಳು, ಸ್ವಸಹಾಯ ಸಂಘಗಳು ಹಾಗೂ ಗ್ರಾಮೀಣ ಉದ್ಯಮಿಗಳಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಆಹಾರ ಸಂಸ್ಕರಣೆಯಲ್ಲಿ ನೈರ್ಮಲ್ಯ ಕಾಪಾಡುವುದು, ಪ್ಯಾಕೇಜಿಂಗ್ ತಂತ್ರಜ್ಞಾನ, ಬ್ರ್ಯಾಂಡಿಂಗ್ ಹಾಗೂ ಉತ್ತಮ ಉತ್ಪಾದನಾ ಪದ್ಧತಿಗಳ ಬಗ್ಗೆ ಪ್ರಾಯೋಗಿಕ ತರಬೇತಿ ದೊರೆಯಲಿದೆ.

Hosadiganta Pg.03

ಬೆಳೆ ಸ್ಪರ್ಧೆಗೆ ರೈತರಿಂದ ಅರ್ಜಿ

• ಬೆಂಗಳೂರು: ಕೃಷಿ ಇಲಾಖೆಯು 2026-27ನೇ ಸಾಲಿನ ಕೃಷಿ ಪ್ರಶಸ್ತಿ ಕಾರ್ಯಕ್ರಮದಲ್ಲಿ ಮುಂಗಾರು ಪಂಗಾಮಿನ ಬೆಳೆ ಸ್ಪರ್ಧೆಗೆ ರೈತರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಕೃಷಿ ಪ್ರಶಸ್ತಿಗಳಿಗೆ ಸ್ಪರ್ಧಿಸಲು ಇಚ್ಛಿಸುವ ಆಸಕ್ತ ರೈತರು ಹಾಗೂ ರೈತ ಮಹಿಳೆಯರು ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಒಂದೇ ಅರ್ಜಿಯನ್ನು ಸಲ್ಲಿಸಬೇಕು. ಕೃಷಿ ಇಲಾಖೆಯ https://kkisan.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಿದ್ದು, ಅರ್ಜಿ ಸಲ್ಲಿಸಲು ಎಫ್‌ಐಡಿ (FRUITS Identification) ಸಂಖ್ಯೆ ಕಡ್ಡಾಯವಾಗಿದೆ. ಸಾರ್ವಜನಿಕ ಸೇವಾ ಕೇಂದ್ರಗಳ ಮೂಲಕ ಆನ್‌ಲೈನ್ ದಾಖಲೆಗಳೊಂದಿಗೆ ಆ.31 ರೊಳಗಾಗಿ ಅರ್ಜಿ ಸಲ್ಲಿಸಬೇಕು.

Hosadiganta Pg.02

ರೈತರು ಸಾಂಪ್ರದಾಯಿಕ ಮೀನು ಸಾಕಣೆ ಜತೆಗೆ ಸುಧಾರಿತ ಮೀನು ತಳಿ ಕೃಷಿಗೆ ಆದ್ಯತೆ ನೀಡುವುದು ಸೂಕ್ತ
ಮೀನು ಕೃಷಿಯಿಂದ ಆದಾಯ ದ್ವಿಗುಣ

• ದೇವಿತಾ.ಸಿ.ಸುಬ್ಬಯ್ಯ

• ಬೆಂಗಳೂರು: ಕೃಷಿಯಲ್ಲಿ ಹೊಸ ಪ್ರಯೋಗಗಳು ನಡೆಯುತ್ತಿರುವ ಇಂದಿನ ದಿನಗಳಲ್ಲಿ ಮೀನು ಕೃಷಿಯೂ ವೇಗವಾಗಿ ಬದಲಾಗುತ್ತಿದೆ. ರೈತರು ಸಾಂಪ್ರದಾಯಿಕ ಮೀನು ಸಾಕಣೆಯ ಜತೆಗೆ ಸುಧಾರಿತ ಮೀನು ತಳಿಗಳು, ಅಲಂಕಾರಿಕ ಮೀನು ಸಾಕಣೆ ಹಾಗೂ ಸಂಯೋಜಿತ ಮೀನು ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡರೆ ಹೆಚ್ಚು ಆದಾಯಗಳಿಸಬಹುದಾಗಿದೆ.

ಬೆಂಗಳೂರು ಸೇರಿದಂತೆ ಅನೇಕ ನಗರಗಳಲ್ಲಿ ಅಲಂಕಾರಿಕ ಮೀನುಗಳಿಗೆ ದಿನದಿಂದ ದಿನಕ್ಕೆ ಬೇಡಿಕೆ ಹೆಚ್ಚುತ್ತಿದೆ. ಮನೆಗಳು, ಕಚೇರಿಗಳು ಮತ್ತು ವಾಣಿಜ್ಯ ಕಟ್ಟಡಗಳಲ್ಲಿ ಅಕ್ವೇರಿಯಂ ಇರುವ ಹವ್ಯಾಸ ಹೆಚ್ಚಾಗುತ್ತಿರುವುದರಿಂದ ಬಣ್ಣಬಣ್ಣದ ಅಲಂಕಾರಿಕ ಮೀನುಗಳ ಮಾರುಕಟ್ಟೆ ವಿಸ್ತರಿಸುತ್ತಿದೆ. ಈ ಬೇಡಿಕೆಗೆಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ (ಜಕೆವಿ) ಒಳನಾಡು ಮೀನುಗಾರಿಕೆ ವಿಭಾಗವು ಉತ್ತಮ ಗುಣಮಟ್ಟದ ತಿಳುವ ಮೀನಿನ ಮರಿಗಳು, ಅಲಂಕಾರಿಕ ಮೀನುಗಳು ಹಾಗೂ ಸುಧಾರಿತ ತಳಗಳ ಉತ್ಪಾದನೆ ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ರೈತರಿಗೆ ಮಾರ್ಗದರ್ಶನ ನೀಡುತ್ತಿದೆ.

ಅಲಂಕಾರಿಕ ಮೀನು ಸಾಕಣೆ ಹೆಚ್ಚುತ್ತಿರೆ ಬೇಡಿಕೆ: ಅಲಂಕಾರಿಕ ಮೀನು ಸಾಕಣೆ ಸಾಮಾನ್ಯ ಮೀನು ಸಾಕಣೆಯಂತೆ ಸಂಪೂರ್ಣ ಭಿನ್ನವಾಗಿದ್ದು, ಕಡಿಮೆ ಜಾಗದಲ್ಲಿಯೇ ಈ ಉದ್ಯಮ ಆರಂಭಿಸಬಹುದಾಗಿದ್ದು, ಹೆಚ್ಚು ಬ್ಯಾಂಕ್‌ಗಳು ಹಾಗೂ ವಿಶೇಷ ನಿರ್ವಹಣೆ ಆಗತ್ಯ.



ಮೊಟ್ಟೆ ಇಡುವ ಮತ್ತು ನೇರವಾಗಿ ಮರಿಗಳನ್ನು ಹಾಕುವ ಮೀನುಗಳ ಸಾಕಣೆ ವಿಧಾನಗಳು ವೇರೆಯಿದ್ದು, ಗಂಡು-ಹೆಣ್ಣು ಮೀನುಗಳ ಸಮತೋಲನ, ಸಂತಾನೋತ್ಪತ್ತಿ ಕೊಳ, ನರ್ಸರಿ ಕೊಳ ಹಾಗೂ ಆಹಾರ ನಿರ್ವಹಣೆಗೆ ವಿಶೇಷ ಗಮನ ಕೊಡಬೇಕು. ಸುರಿಯದ ತಾಂತ್ರಿಕ ಜ್ಞಾನವಿದ್ದರೆ ಈ ಕ್ಷೇತ್ರದಲ್ಲಿ ಉತ್ತಮ ಆದಾಯ ಗಳಿಸಬಹುದು.

ಮೀನು ಕೃಷಿಯೂ ವೇಗವಾಗಿ ಅಭಿವೃದ್ಧಿಯಾಗುತ್ತಿದೆ. ವೈಜ್ಞಾನಿಕ ವಿಧಾನಗಳು ಮತ್ತು ಸುರಿತ ತಳಿಗಳನ್ನು ಅಳವಡಿಸಿಕೊಂಡರೆ ರೈತರು ಕಡಿಮೆ ಜಾಗದಲ್ಲಿ ಹೆಚ್ಚು ಆದಾಯ ಗಳಿಸಬಹುದು.
■ ಡಾ. ಹರ್ಷ ಹಾಯ್, ಸಹಾಯಕ ಪ್ರಾಧ್ಯಾಪಕರು, ಒಳನಾಡು ಮೀನುಗಾರಿಕೆ ಘಟಕ, ಕೃಷಿ ವಿವಿ

ಕೃಷಿ ಹೊಂಡದಲ್ಲಿಯೇ ಹೆಚ್ಚುವರಿ ಆದಾಯ: ಬಹುತೇಕ ರೈತರು ಕೃಷಿ ಹೊಂಡಗಳನ್ನು ಕೇವಲ ನೀರು ಸಂಗ್ರಹಿಸಲು ಬಳಸುತ್ತಾರೆ. ಆದರೆ ಅದೇ ಹೊಂಡದಲ್ಲಿ ಮೀನು ಸಾಕಣೆ ಮಾಡಿದರೆ ವರ್ಷಕ್ಕೆ ಸುಮಾರು 150 ರಿಂದ 200 ಕೆಜಿ ಮೀನು ಉತ್ಪಾದಿಸಬಹುದು. ಇದರಿಂದ ಹೆಚ್ಚುವರಿ ಆದಾಯ ಗಳಿಸುವ ಜತೆಗೆ, ಕೃಷಿಯೊಂದಿಗೆ ಮತ್ತೊಂದು ಸ್ಥಿರ ಆದಾಯದ ಮೂಲವೂ ಸಿಗುತ್ತದೆ.

3 ಕೋಟಿಗೂ ಅಧಿಕ ಮೌಲ್ಯದ ವ್ಯಾಪಾರ: ಬೆಂಗಳೂರಿನಲ್ಲಿ ಪ್ರತಿ ತಿಂಗಳು ಅಂದಾಜು 3 ಕೋಟಿಗೂ ಅಧಿಕ ಮೌಲ್ಯದ ಮೀನುಗಳ ವ್ಯಾಪಾರ ನಡೆಯುತ್ತದೆ. ನಗರದಲ್ಲಿ ಸುಮಾರು 3 ರಿಂದ 4 ಸಾವಿರದಷ್ಟು ಚಿಲ್ಲರೆ ಮೀನು ಅಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಅಲಂಕಾರಿಕ ಮೀನು ಪೂರೈಕೆಯಾಗುತ್ತದೆ. ಬೇಡಿಕೆಯನ್ನು ಪೂರೈಸಲು ತುಮಕೂರು, ಕೆರಳ, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದಲೂ ಬೆಂಗಳೂರಿಗೆ ಪ್ರತಿನಿತ್ಯ ಮೀನುಗಳನ್ನು ಸರಬರಾಜು ಮಾಡಿಕೊಳ್ಳಲಾಗುತ್ತದೆ.



ರೈತರಿಗೆ ಸಮಗ್ರ ತರಬೇತಿ

ಕೃಷಿ ವಿಶ್ವವಿದ್ಯಾನಿಲಯವು ಮೀನು ಕೃಷಿಯಲ್ಲಿ ಆಸಕ್ತ ಹೊಂದಿರುವ ರೈತರಿಗೆ ವಿಶೇಷ ತರಬೇತಿ ನಡೆಸುತ್ತಿದೆ. ಮೀನು ಕೊಳ ನಿರ್ಮಾಣ, ಅಲಂಕಾರಿಕ ಮೀನು ಉತ್ಪಾದನೆ, ಮೀನು ಮರಿಗಳ ನರ್ಸರಿ ನಿರ್ವಹಣೆ, ನೀರಿನ ಗುಣಮಟ್ಟ ತಳಗಳು, ಮೀನು ಆಹಾರ ತಯಾರಿಕೆ, ರೋಗ ನಿರ್ವಹಣೆ, ಕೃಷಿ ಹೊಂಡಗಳಲ್ಲಿ ಮೀನು ಸಾಕಣೆ ಹಾಗೂ ಸರ್ಕಾರದ ಯೋಜನೆಗಳ ಕುರಿತು ರೈತರಿಗೆ ಪ್ರಾಯೋಗಿಕ ಮಾಹಿತಿ ನೀಡಲಾಗುತ್ತದೆ. ಈ ಧಾನ ಆ. 6,7 ಹಾಗೂ 8 ರಂದು ತರಬೇತಿಯನ್ನು ಆಯೋಜಿಸಿದ್ದು, 25 ಜನರಿಗೆ ತರಬೇತಿ ನೀಡಲಾಗುತ್ತದೆ.

Hosadiganta Pg.12

ಮಧ್ಯಪ್ರಾಚ್ಯದಲ್ಲಿನ ಯುದ್ಧದ ಜಿಕ್ಕಟ್ಟಿನ ಹಿನ್ನೆಲೆಯಲ್ಲಿ ರಸಗೊಬ್ಬರ ಪೂರೈಕೆಗೆ ಅಡಚಣೆಯಾಗಿದ್ದು, ರೈತರಿಗೆ ಸಮಸ್ಯೆಯಾಗಿದೆ. ಮುಂಗಾರಿನ ಸಂದರ್ಭದಲ್ಲಿ ತೊಂದರೆ ಉಂಟಾಗದಿದ್ದರೂ ಮುಂದೆ ಹಿಂಗಾಲಿಗೆ ಮತ್ತೆ ರಸಗೊಬ್ಬರದ ಕೊರತೆಯಾಗುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಹೀಗಾಗಿ ಸರ್ಕಾರ ಯೂರಿಯಾ ಉತ್ಪಾದನೆಗೆ ರಾಷ್ಟ್ರೀಯ ಹೂಡಿಕೆ ನೀತಿ ರೂಪಿಸಿ ಅನುಮೋದನೆ ನೀಡಿದೆ.

- ಎಂಟು ಹೊಸ ರಸಗೊಬ್ಬರ ಘಟಕ ಸ್ಥಾಪನೆ
- ಆಮದು ಇಳಿಕೆ ಸಂಭವ
- 90,000 ಕೋಟಿ ರೂ ಹೂಡಿಕೆ ನಿರೀಕ್ಷೆ



ರಾಷ್ಟ್ರೀಯ ಹೂಡಿಕೆ ನೀತಿಗೆ ಅನುಮೋದನೆ

ರಸಗೊಬ್ಬರ ಸ್ವಾವಲಂಬನೆಗೆ ಹೊಸ ಹೆಜ್ಜೆ



ರಸಗೊಬ್ಬರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಯೂರಿಯಾ ಉತ್ಪಾದನೆಗೆ ರಾಷ್ಟ್ರೀಯ ಹೂಡಿಕೆ ನೀತಿ ರೂಪಿಸಿ ಅನುಮೋದನೆ ನೀಡಿರುವುದು ಹೊಸ ನಿರೀಕ್ಷೆಯನ್ನು ಹುಟ್ಟು ಹಾಕಿದೆ. ಇದಕ್ಕೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಇತ್ತೀಚೆಗೆ ಅನುಮೋದನೆ ನೀಡಿದೆ.

ಹೊಸ ಯೋಜನೆಯಡಿ 10 ದಶಲಕ್ಷ ಟನ್ ಹೆಚ್ಚುವರಿ ಉತ್ಪಾದನಾ ಸಾಮರ್ಥ್ಯವುಳ್ಳ ಎಂಟು ಹೊಸ ರಸಗೊಬ್ಬರ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ ನೈಟ್ರೋಜನ್ ಮೊಷಕಾಂಶದ ಆಮದು ಪ್ರಮಾಣ ತಗ್ಗಬಹುದೆಂದು ಆಶಿಸಲಾಗಿದೆ. ಹೊಸ ನೀತಿಯಡಿ ಸಾರ್ವಜನಿಕ, ಖಾಸಗಿ ಹಾಗೂ ಸಹಕಾರಿ ಕ್ಷೇತ್ರಗಳ ಭಾಗೀದಾರಿಕೆಗೆ ಅವಕಾಶ ಕಲ್ಪಿಸಲಾಗಿದೆ. ಇದೇ ಸಂದರ್ಭದಲ್ಲಿ ರಸಗೊಬ್ಬರ ಉತ್ಪಾದನೆಗೆ 90,000 ಕೋಟಿ ರೂ ಹೊಸ ಬಂಡವಾಳ ಹರಿದುಬರಲಿದೆ ಎಂದು ನಿರೀಕ್ಷಿಸಲಾಗಿದೆ. ವಾರ್ಷಿಕ 1.27 ದಶಲಕ್ಷ ಟನ್ ಉತ್ಪಾದನಾ ಸಾಮರ್ಥ್ಯದ ಗ್ರೀನ್‌ಫೀಲ್ಡ್ ಯೂರಿಯಾ ಪ್ಲಾಂಟ್‌ಗೆ 1.2–1.5 ಶತಕೋಟಿ ಡಾಲರ ಹಾಗೂ ಇದೇ ಮಾದರಿಯ ಉತ್ಪಾದನಾ ಸಾಮರ್ಥ್ಯವುಳ್ಳ ಬ್ರೌನ್‌ಫೀಲ್ಡ್ ಘಟಕಕ್ಕೆ 900 ದಶಲಕ್ಷ ಡಾಲರ್ ಹೂಡಿಕೆ ಆಗತ್ಯವಿದೆ ಎಂದು ರಸಗೊಬ್ಬರ ಉದ್ಯಮದ ಮೂಲಗಳು ತಿಳಿಸಿವೆ.

ಆಮದಿಗೆ ಅಡಚಣೆ

ಇರಾನ್–ಅಮೆರಿಕಾ–ಇಸ್ರೇಲ್ ಸಂಘರ್ಷ ಆರಂಭವಾದಾಗಿನಿಂದ ರಸಗೊಬ್ಬರ ಆಮದಿಗೆ ಅಡಚಣೆಯಿಂಟಾಗಿದೆ. ಮುಂಗಾರು ಹಂಗಾಮಿಗೆ ಯಾವುದೇ ತೊಂದರೆ ಉಂಟಾಗದಿದ್ದರೂ ಹಿಂಗಾರಿ ಹಂಗಾಮಿಗೆ ರಸಗೊಬ್ಬರ ಕೊರತೆ ಉಂಟಾಗುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಪ್ರಸ್ತುತ ಭಾರತ 10 ದಶಲಕ್ಷ ಟನ್ ಯೂರಿಯಾ ಆಮದು ಮಾಡಿಕೊಳ್ಳುತ್ತಿದೆ. ಆಂತರಿಕ ಉತ್ಪಾದನೆ 30 ದಶಲಕ್ಷ ಟನ್‌ದಷ್ಟಿದ್ದರೆ, ವಾರ್ಷಿಕ ಬೇಡಿಕೆ ಸುಮಾರು 40 ದಶಲಕ್ಷ ಟನ್‌ದಷ್ಟಿದೆ ಎಂದು ಹೇಳಲಾಗಿದೆ. ಆಹಾರಧಾನ್ಯ ಉತ್ಪಾದನೆ ಹೆಚ್ಚಳ ಹಾಗೂ ಬದಲಾದ ಬೆಳೆ ಪದ್ಧತಿ, ಕೃಷಿ ಚಟುವಟಿಕೆಗೆ ಅನುಗುಣವಾಗಿ ರಸಗೊಬ್ಬರಕ್ಕೆ ಬೇಡಿಕೆ ವಾರ್ಷಿಕವಾಗಿ ಕೇ.ನಿ.ರಷ್ಟು ಹೆಚ್ಚಳವಾಗಿದೆ ಎಂದು ತಿಳಿದುಬಂದಿದೆ. ಉದಾಹರಣೆಗೆ ಎಥನಾಲ್ ಉತ್ಪಾದನೆಗೆ ಗೋಎನಿಷೋಳದ ಆಗತ್ಯ ಇರುವದರಿಂದ ಈ ಬೆಳೆಯ ಹೆಕ್ಟೇರ್‌ವಾರು ಬಕ್ತಿನ ಕ್ಷೇತ್ರ ವಿಸ್ತಾರವಾಗುತ್ತಿದೆ. ಹೀಗಾಗಿ ಸಹಜವಾಗಿಯೇ ಯೂರಿಯಾಕ್ಕೆ ಬೇಡಿಕೆ ಹೆಚ್ಚಾಗಿದೆ.

ವಿದೇಶಿ ವಿನಿಮಯ ಉಳತಾಯ

ಒಂದು ವೇಳೆ ಹೊಸ ಘಟಕಗಳು ಸಮರ್ಥವಾಗಿ ಕಾರ್ಯನಿರ್ವಹಿಸಿದರೆ ಪ್ರತಿ ಘಟಕದ ಮೂಲಕ 250 ಕೋಟಿ ರೂ ವಿದೇಶಿ ವಿನಿಮಯ ಉಳತಾಯವಾಗಲಿದೆ ಎಂದು ಹೇಳಲಾಗುತ್ತಿದೆ. ಕಳೆದ ದಶಕದಲ್ಲಿ 1.27 ದಶಲಕ್ಷ ಟನ್ ಸಾಮರ್ಥ್ಯದ ಆರು ಯೂರಿಯಾ ಪ್ಲಾಂಟುಗಳನ್ನು ಸ್ಥಾಪಿಸಲಾಗಿದೆ. ಈ ಪೈಕಿ ಏರಡು ಪ್ಲಾಸಿ ಪ್ಲಾಂಟುಗಳಾಗಿದ್ದು, ನಾಲ್ಕು ಮುಚ್ಚಲ್ಪಟ್ಟ ಪ್ಲಾಂಟ್‌ಗಳನ್ನು ಉರ್ಜಿತಗೊಳಿಸಲಾಗಿದೆ. ಹೊಸ ನೀತಿಯಡಿ ಕಲ್ಲಿದ್ದಲು ಆಧಾರಿತ ಯೂರಿಯಾ ಉತ್ಪಾದನೆಗೆ ಅವಕಾಶ ಇದೆ ಎಂದು ಹೇಳಲಾಗಿದೆ. ಸೆ.95ರಷ್ಟು ಯೂರಿಯಾ ಉತ್ಪಾದನೆ ನೈಸರ್ಗಿಕ ಅನಿಲದ ಮೂಲಕ ಮಾಡಲಾಗುತ್ತಿದೆ. ಇದಕ್ಕಾಗಿ ಎಲ್‌ಎನ್‌ಜಿ ಆಮದು ಮಾಡಿಕೊಳ್ಳಲಾಗುತ್ತಿದೆ. ಅದ್ದರಿಂದ ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಹೆಚ್ಚಿಸಲು ಕ್ರಮ ಅನಿವಾರ್ಯವಾಗಿದೆ.

ಹಿಂಗಾರಿಗೆ ಸಮಸ್ಯೆ

ಈಗ ಮತ್ತೊಂದು ಆತಂಕ ಎದುರಾಗಿದೆ ಮಧ್ಯಪ್ರಾಚ್ಯದ ಯದ್ದದ ಹಿನ್ನೆಲೆಯಲ್ಲಿ ರಸಗೊಬ್ಬರ ಬೆಲೆ ಏರಿಕೆ ಜೊತೆಗೆ ಈ ಬಾರಿ ಮುಂಗಾರು ಕೈ ಕೊಟ್ಟಿದ್ದು, ರಸಗೊಬ್ಬರ ಬಳಕೆ ಪ್ರಮಾಣ ಗಣನೀಯವಾಗಿ ಕುಸಿಯಲಿದೆ. ಒಂದು ವೇಳೆ ಇದು ನಿಜವೇ ಆದರೆ ಬೆಳೆಗಳ ಇಳುವರಿ ಕುಂಠಿತವಾಗುವ ಭೀತಿ ಎದುರಾಗಿದೆ. ಮಾರುಕಟ್ಟೆಗೆ ಬೆಳೆಗಳ ಆವಕದ ಪ್ರಮಾಣವೂ ಇಳಿಮುಖವಾಗಲಿದೆ. ಕೆಲವು ಪರಿಣಿತರ ಪ್ರಕಾರ ಮುಂಗಾರಿನಲ್ಲಿ ರಸಗೊಬ್ಬರ ಕೊರತೆ ಉಂಟಾಗದಿದ್ದರೂ ಯಿದ್ದದ ಪರಿಣಾಮವಾಗಿ ಹಿಂಗಾರು ಹಂಗಾಮಿಗೆ ರಸಗೊಬ್ಬರ ಕೊರತೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿದ್ದೇ ಆದರೆ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ತೊಂದರೆಯಾಗಲಿದೆ. ಬೆಳೆಗಳ ಸಸ್ಯ ಪೋಷಕಾಂಶಗಳು ಸಮರ್ಪಕವಾಗಿ ಲಭ್ಯವಾಗದೇ ಬೆಳವಣಿಗೆ ಹಾಗೂ ಇಳುವರಿ ಕಡಿಮೆಯಾಗಿ ಉತ್ಪಾದನೆ ಇಳಿಮುಖವಾಗಿದೆ. ಅದ್ದರಿಂದ ರೈತರಿಗೆ ಯೂರಿಯಾ ಮತ್ತಿತರ ರಸಗೊಬ್ಬರಗಳ ಪೂರೈಕೆ ಸಮರ್ಪಕವಾಗಿರುವ ನಿಟ್ಟಿನಲ್ಲಿ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವದು ಇಂದಿನ ಅಗತ್ಯ.

Samyuktha Karnataka Pg.08

ಶ್ರೀಗಂಧ ಬೆಳೆಗೂ ಏಕರೂಪದ ಕಾನೂನು ಜಾರಿ ಮಾಡಿ

ವಿಕ ಸುದ್ದಿಲೋಕ ಬೆಂಗಳೂರು


ಶ್ರೀಗಂಧದ ಬೆಳೆಗಾರರಿಗೆ ದೇಶಾದ್ಯಂತ ಏಕರೂಪದ ಕಾನೂನು ಜಾರಿಗೆ ತರಬೇಕು ಎಂದು ಆಖಿಲ ಭಾರತ ಶ್ರೀಗಂಧ ರೈತರ, ಸಂಸ್ಕರಣೆದಾರರ ಮತ್ತು ಮಾರುಕಟ್ಟೆದಾರರ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕರ್ನಾಟಕದ ನಿವೃತ್ತ ಐಎಎಸ್ ಅಧಿಕಾರಿ ಕೆ. ಅಮರನಾರಾಯಣ ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಒತ್ತಾಯಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಶ್ರೀಗಂಧ ಬೆಳೆಗಾರರು, ಸಂಸ್ಕರಣಾಕಾರರು ಮತ್ತು ಮಾರುಕಟ್ಟೆದಾರರ ದುಂಡು ಮೇಜಿನ ಸಭೆಯಲ್ಲಿ ಶ್ರೀಗಂಧ ಬೆಳೆಗಾರರಿಗೆ ಏಕರೂಪ ನೀತಿ ಜಾರಿಗೆ ತರಬೇಕೆಂಬುದೂ ಸೇರಿದಂತೆ ಶ್ರೀಗಂಧದ ಬೆಳೆಗಾರರ ಕುರಿತು ಹಲವು ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಏಕರೂಪದ ನೀತಿ ಜಾರಿಯಿಂದ ಗುಣಮಟ್ಟದ ಉತ್ಪಾದನೆ, ಆಧುನಿಕ ಸಂಸ್ಕರಣಾ ವಿಧಾನಗಳ ಅಳವಡಿಕೆ, ಕಳ್ಳತನ ತಡೆಗಟ್ಟುವಿಕೆ ಮತ್ತು ಮಾರುಕಟ್ಟೆ ವ್ಯವಸ್ಥೆಯ ಮೂಲಕ ಶ್ರೀಗಂಧ ಬೆಳೆಗಾರರ ಆದಾಯವನ್ನು ಹೆಚ್ಚಿಸಬಹುದು. ಈ ಕುರಿತು ಒಕ್ಕೂಟದ ಮೊದಲ ಸಭೆಯಲ್ಲಿ ಶ್ರೀಗಂಧ ಮೌಲ್ಯ ಸರಪಳಿಯನ್ನು ಬಲಪಡಿಸಲು, ರೈತರಿಗೆ ತಾಂತ್ರಿಕ ಹಾಗೂ ಮಾರುಕಟ್ಟೆ ಬೆಂಬಲವನ್ನು ವೃದ್ಧಿಸಲು ಮತ್ತು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆಗ್ಯವಾದ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಒಮ್ಮತ ವ್ಯಕ್ತವಾಯಿತು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಶ್ರೀಗಂಧ ಬೆಳೆಗಾರರು ಎದುರಿಸುತ್ತಿರುವ ಸವಾಲುಗಳು, ಮಾಲ್ವೆವರ್ಧನೆ, ಸಂಸ್ಕರಣಾ ತಂತ್ರಜ್ಞಾನ, ಮಾರುಕಟ್ಟೆ ಅವಕಾಶಗಳು ಹಾಗೂ ರಫ್ತು ಸಾಮರ್ಥ್ಯ ಹಾಗೂ ಆಮದಿನಿಂದಾಗುವ ಪರಿಣಾಮಗಳ ಕುರಿತು ಚರ್ಚೆ ನಡೆಸಲಾಯಿತು. ಎಲ್ಲಾ ರಾಜ್ಯಗಳ ಬೆಳೆಗಾರರನ್ನು ಒಳಗೊಂಡಲ್ಲಿ ಉಪಸ್ಥಿತರಿದ್ದರು.

ಶ್ರೀಗಂಧದ ಬೆಳೆಗಾರರ ಒಕ್ಕೂಟ ಒತ್ತಾಯ



ಸೇರಿಸಿಕೊಂಡು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮೇಲೆ ಒತ್ತಡ ಹೇರಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು ಎಂದರು.

ಶ್ರೀಗಂಧ ಕ್ಷೇತ್ರದ ಸುಸ್ಥಿರ ಬೆಳವಣಿಗಾಗಿ ರೈತರು- ಕೈಗಾರಿಕೆ ಮತ್ತು ಸರಕಾರದ ನಡುವೆ ಸಮನ್ವಯವನ್ನು ಮತ್ತಷ್ಟು ಬಲಪಡಿಸುವ ಆಗತ್ಯವಿದೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ರೈತರು, ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು.

ಗುಣಮಟ್ಟದ ಉತ್ಪಾದನೆ, ಆಧುನಿಕ ಸಂಸ್ಕರಣಾ ವಿಧಾನಗಳ ಅಳವಡಿಕೆ, ಕಳ್ಳತನ ತಡೆಗಟ್ಟುವುದು ಮತ್ತು ಮಾರುಕಟ್ಟೆ ಸಂಪರ್ಕವನ್ನು ವಿಸ್ತರಿಸುವ ಮೂಲಕ ಶ್ರೀಗಂಧ ಬೆಳೆಗಾರರ ಆದಾಯವನ್ನು ಹೆಚ್ಚಿಸಬಹುದು ಎಂದು ಅವರು ಸಲಹೆ ಮಾಡಿದರು.

ಶ್ರೀಗಂಧ ಆಭಿವೃದ್ಧಿ ಸಮಿತಿ ಸದಸ್ಯ ಕಾರ್ಯದರ್ಶಿ ರಾಜೇಶ್ವರ್ ರಾವ್, ಸ್ಯಾಂಡಲ್‌ವುಡ್ ಆಗ್ರೋ ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಸುರೇಂದ್ರ ಮೋಹನ್ ಗುಪ್ತ ಮತ್ತಿತರರು ಉಪಸ್ಥಿತರಿದ್ದರು.

Vijaya Karnataka Pg.10

ಅಡಿಕೆ ಕ್ಷೇತ್ರಕ್ಕೆ ವರದಾನವಾಗುವುದೇ ಚೀನಾ ಸಂಶೋಧನೆ?



ಜನಪಥ
ರಾಘವ ಶರ್ಮಾ ನಿಡ್ಲೆ
vveditoped@gmail.com

2026ರ ಜನವರಿ ತಿಂಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ (WHO) ದಕ್ಷಿಣ ಪೂರ್ವ ಏಷ್ಯಾ ಪ್ರಾದೇಶಿಕ ಕಚೇರಿಯು ಅಡಿಕೆ ಬೆಳೆಗೆ ಸಂಬಂಧಿಸಿದ ಮೊಸಾಕ್ ಒಂದನ್ನು ಬಿಡುಗಡೆಮಾಡಿತ್ತು. ಕಳೆದ ಆನೇಕ ವರ್ಷಗಳಿಂದ ಅಡಿಕೆ ವಿರೋಧಿ ನೀತಿ ಅಳವಡಿಸಿಕೊಂಡಿರುವ ಡಬ್ಲ್ಯೂಹೆಚ್‌ಒ ಈ ಸಭೆಯಲ್ಲೂ ಅದೇ ವಾದವನ್ನೇ ಮುಂದಿಟ್ಟಿತು. ಅಡಿಕೆ ತಡೆಗಟ್ಟುವಲ್ಲಿ ಕಾರ್ಯಕ್ರಮಗಳ ಜತೆಗೆ ಅಡಿಕೆ ಸಂಬಂಧಿತ ಕೃಷಿಯ ಕಾರ್ಯತಂತ್ರಗಳನ್ನು ಚರ್ಚಿಸುವುದು ಸಭೆಯ ಉದ್ದೇಶವಾಗಿತ್ತು. ಅಡಿಕೆ ಕ್ಯಾನ್ಸರ್‌ಕಾರಕ ಎನ್ನುತ್ತಲೇ ಇರುವ ಡಬ್ಲ್ಯೂಹೆಚ್‌ಒ ಯಾವಾಗ ಬೇಕಾದರೂ ಅದನ್ನು ಬ್ಯಾನ್ ಮಾಡಬಹುದು. ಹಾಗಾಗಿ, ಅಡಿಕೆ ಬೆಳೆಗಾರರ ಮೇಲೆ ನಿಷೇಧದ ತೂಗುಗತ್ತಿ ಸದಾ ಇದೆ. ಭಾರತದಲ್ಲಿ, ಕೋಟ್ಯಂತರ ಕುಟುಂಬಗಳು ಅಡಿಕೆಯನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆವಲಂಬಿಸಿ ಜೀವನ ನಡೆಸುತ್ತಿರುವುದರಿಂದ ಡಬ್ಲ್ಯೂಹೆಚ್‌ಒ ವಾದವನ್ನು ಅಲ್ಲಗೆಳೆಯುವ ಪ್ರಯತ್ನಗಳು ಸಾಕಷ್ಟು ನಡೆದಿವೆ. ಆದರೆ, ಡಬ್ಲ್ಯೂಹೆಚ್‌ಒ ಫೋಷಣೆಯ 16 ವರ್ಷಗಳ ಬಳಿಕ ಚೀನಾ ಕೃಷಿ ವಿಶ್ವವಿದ್ಯಾಲಯದ National Engineering Research Center for Fruit and Vegetable Processing ವಿಜ್ಞಾನದ ನರ್ದೇಶಕ ಕೃಯಾಪೋಷಾಂಗ್ ಹು ಮತ್ತವರ ವಿಜ್ಞಾನಿಗಳ ತಂಡ 10 ವರ್ಷಗಳ ಕಾಲ ಸುದೀರ್ಘ ಸಂಶೋಧನೆ ನಡೆಸಿ, ಅಡಿಕೆಯ ನಿರಂತರ ಜಗಿಯುವಿಕೆಯಿಂದಷ್ಟೇ ಬಾಯಿಯ ಆರೋಗ್ಯಕ್ಕೆ ಹಾನಿಯಾಗುತ್ತದೆ ಎಂದು ಹೇಳಿದೆ. ಅಡಿಕೆಯನ್ನು ನೇರವಾಗಿ ಕ್ಯಾನ್ಸರ್‌ಕಾರಕ ಎಂಬ ಡಬ್ಲ್ಯೂಹೆಚ್‌ಒ ಆಭಿಪ್ರಾಯಕ್ಕೆ ವಿರುದ್ಧವಾಗಿ ಹೇಳಿರುವ ಚೀನಾ ವಿಜ್ಞಾನಿಗಳು ಪರಿಷ್ಕೃತ ಸಾಕ್ಷ್ಯಗಳ ಆಧಾರದಲ್ಲಿ ಈ ಹೊಸ ಸಂಶೋಧನೆಯನ್ನು ಮಂಡಿಸಿದ್ದಾರೆ.

ಆತಿಯಾದರೆ ಆಮೃತವೂ ವಿಷ. ಹಾಗೆಯೇ ತಂಬಾಕು, ಸುಣ್ಣದೊಂದಿಗೆ ಸೇರಿಸಿ ಆಡಿಕೆ ಜಗಿಯುವುದಲ್ಲದೆ ಆಡಿಕೆಯನ್ನು ಸುಡಲು ಕಬ್ಬಿಣ ಬಿಸಿ ಮಾಡುವುದು ಮತ್ತು ಸಂಗೋಪನೆ ಮಾಡುವುದು ಕೂಡ ಆರೋಗ್ಯಕ್ಕೆ ಹಾನಿಕಾರಕ ಎಂದು ಸಂಶೋಧನೆ ಹೇಳಿದೆ. ಆಡಿಕೆಯನ್ನು ನೇರವಾಗಿ ಕ್ಯಾನ್ಸರ್‌ಕಾರಕ ಎಂಬ ಡಬ್ಲ್ಯೂಹೆಚ್‌ಒ ಆಭಿಪ್ರಾಯಕ್ಕೆ ವಿರುದ್ಧವಾಗಿ ಹೇಳಿರುವ ಚೀನಾ ವಿಜ್ಞಾನಿಗಳು ಪರಿಷ್ಕೃತ ಸಾಕ್ಷ್ಯಗಳ ಆಧಾರದಲ್ಲಿ ಈ ಹೊಸ ಸಂಶೋಧನೆಯನ್ನು ಮಂಡಿಸಿದ್ದಾರೆ. ಆಡಿಕೆಯ ಬಗ್ಗೆ ಚೀನಾದ ಸಂಶೋಧನೆಗಳು ಆಡಿಕೆ ಬೆಳೆಗಾರರಿಗೆ ಆಶಾದಾಯಕವಾಗಿದ್ದು, ಚೀನಾದ ಸಂಶೋಧನೆಗಳು ಆಡಿಕೆ ಕ್ಷೇತ್ರಕ್ಕೆ ವರದಾನವಾಗಲಿದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕಾಗಿದೆ.

ಆತಿಯಾದರೆ ಆಮೃತವೂ ವಿಷ. ಹಾಗೆಯೇ ತಂಬಾಕು, ಸುಣ್ಣದೊಂದಿಗೆ ಸೇರಿಸಿ ಆಡಿಕೆ ಜಗಿಯುವುದಲ್ಲದೆ ಆಡಿಕೆಯನ್ನು ಸುಡಲು ಕಬ್ಬಿಣ ಬಿಸಿ ಮಾಡುವುದು ಮತ್ತು ಸಂಗೋಪನೆ ಮಾಡುವುದು ಕೂಡ ಆರೋಗ್ಯಕ್ಕೆ ಹಾನಿಕಾರಕ ಎಂದು ಸಂಶೋಧನೆ ಹೇಳಿದೆ. ಆಡಿಕೆಯನ್ನು ನೇರವಾಗಿ ಕ್ಯಾನ್ಸರ್‌ಕಾರಕ ಎಂಬ ಡಬ್ಲ್ಯೂಹೆಚ್‌ಒ ಆಭಿಪ್ರಾಯಕ್ಕೆ ವಿರುದ್ಧವಾಗಿ ಹೇಳಿರುವ ಚೀನಾ ವಿಜ್ಞಾನಿಗಳು ಪರಿಷ್ಕೃತ ಸಾಕ್ಷ್ಯಗಳ ಆಧಾರದಲ್ಲಿ ಈ ಹೊಸ ಸಂಶೋಧನೆಯನ್ನು ಮಂಡಿಸಿದ್ದಾರೆ. ಆಡಿಕೆಯ ಬಗ್ಗೆ ಚೀನಾದ ಸಂಶೋಧನೆಗಳು ಆಡಿಕೆ ಬೆಳೆಗಾರರಿಗೆ ಆಶಾದಾಯಕವಾಗಿದ್ದು, ಚೀನಾದ ಸಂಶೋಧನೆಗಳು ಆಡಿಕೆ ಕ್ಷೇತ್ರಕ್ಕೆ ವರದಾನವಾಗಲಿದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕಾಗಿದೆ.

ಜಾಗತಿಕವಾಗಿ ಅಂತಿಮವಾಗಿ ತೀರ್ಮಾನವಾದ ಆನಾರೋಗ್ಯಕ್ಕೆ ಕಾರಣವಾಗಿರುವುದು' ಎನ್ನುವುದು ಕೃಯಾಪೋಷಾಂಗ್ ಹು ಅವರ ಹೊಸ ಅಧ್ಯಯನದ ಸಾರಾಂಶ. 'ಕೆಲ ಆಡಿಕೆ ಉತ್ಪನ್ನಗಳನ್ನು ಹೊತ್ತು ಆಲ್ಪಲಾಯ್ಡ್ (ಕ್ಷಾರೀಯ) ಸಂಯುಕ್ತಗಳನ್ನು ಬಳಸಿ ಸಂಸ್ಕರಿಸಲಾಗುತ್ತದೆ. ಈ ವಸ್ತುಗಳು ಬಾಯಿಯ ಒಳಪದರವನ್ನು ಹಾನಿಗೊಳಿಸುವುದು. ಇದರಿಂದಾಗಿ ಆಡಿಕೆ ಜಗಿಯುವ ಜನ ಹೆಚ್ಚಿನಮಟ್ಟಿಗೆ ಪ್ರವೇಶದಲ್ಲಿ ಬಾಯಿಯ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ' ಎನ್ನುತ್ತಾರೆ ಕೃಯಾಪೋಷಾಂಗ್ ಹು.

ಆಡಿಕೆ ಜೀವಾಣುವಿನ ಆಳವಾದ ತಿಳುವಳಿಕೆ ಮತ್ತು ಸಂಶೋಧನೆಯ ಹಾನಿ ಪ್ರಮಾಣ ಕಡಿಮೆ ಮಾಡುವುದಲ್ಲದೆ, ಆಡಿಕೆ ಉತ್ಪನ್ನಗಳ ಉಪಯೋಗಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬಲ್ಲದು ಎಂದಿರುವ ವಿಜ್ಞಾನಿಗಳು, ಆಡಿಕೆ ಉತ್ಪನ್ನಗಳನ್ನು ಆಲ್ಪಲಾಯ್ಡ್ ಅಂಶಗಳನ್ನು ತಗ್ಗಿಸಲು ಹಾಗೂ ನಾರುಗಳ ಗುಚ್ಛಗೊಳ್ಳಿಕೆ ತಡೆಯಲು ಕ್ರಮ ಕೈಗೊಂಡಲ್ಲಿ ಬಾಯಿಯ ಆರೋಗ್ಯಕಾಗಿರುವ ಆಪಾಯ ತಪ್ಪಿಸಬಹುದು ಎಂದಿದ್ದಾರೆ.

ಆಡಿಕೆ ಜೀವಾಣುವಿನ ತಳಿಗಳ ಮೇಲೆ ಸಂಶೋಧನೆ ನಡೆಸಿದ ಕೃಷಿ ವಿಜ್ಞಾನಿಗಳು ಆಡಿಕೆಯಲ್ಲಿ ಕಂಡುಬರುವ ಕೆಲವು ಜೀವಾಣುಗಳು ಆಡಿಕೆಯ ಸಂಸ್ಕರಣೆಯ ಸಮಯದಲ್ಲಿ ಉತ್ಪತ್ತಿಯಾಗುವ ಕೆಲವು ಕ್ಯಾನ್ಸರ್‌ಕಾರಕ ಅಂಶಗಳನ್ನು ಕಡಿಮೆ ಮಾಡಲು ಸಹಾಯಕವಾಗಿವೆ ಎಂದು ಹೇಳಿದ್ದಾರೆ. ಆಡಿಕೆಯ ಸಂಸ್ಕರಣೆಯ ಸಮಯದಲ್ಲಿ ಉತ್ಪತ್ತಿಯಾಗುವ ಕ್ಯಾನ್ಸರ್‌ಕಾರಕ ಅಂಶಗಳನ್ನು ಕಡಿಮೆ ಮಾಡಲು ಸಹಾಯಕವಾಗಿವೆ ಎಂದು ಹೇಳಿದ್ದಾರೆ. ಆಡಿಕೆಯ ಸಂಸ್ಕರಣೆಯ ಸಮಯದಲ್ಲಿ ಉತ್ಪತ್ತಿಯಾಗುವ ಕ್ಯಾನ್ಸರ್‌ಕಾರಕ ಅಂಶಗಳನ್ನು ಕಡಿಮೆ ಮಾಡಲು ಸಹಾಯಕವಾಗಿವೆ ಎಂದು ಹೇಳಿದ್ದಾರೆ.

ತಜ್ಞರ ತಂಡವು ಕ್ಷೇತ್ರಕ್ಕೆ ಆಮೆರಿಕದ ಕ್ರಮ ಆರ್ಥಿಕ ಹೊಡೆತ ನೀಡಿತು. ರಫ್ತುದಾರರು, ತಯಾರಕರು ಮತ್ತು ಈ ಸುಸ್ಥಿರ ಉದ್ಯಮವನ್ನು ನೆಚ್ಚಿಕೊಂಡ ಸಾವಿರಾರು ರೈತರ ಜೀವನೋಪಾಯವನ್ನೂ ಅದು ಅಸ್ಥಿತ್ವತೆ ಉಂಟುಮಾಡಿತು. ದಕ್ಷಿಣ ಕನ್ನಡ ಜಲ್ಲೆಯ ಬೆಳ್ಳಂಡಿ ತಾಲೂಕಿನ ಬರಂಗಾಯ ಎಂಬ ಸಣ್ಣಗ್ರಾಮದಿಂದ ಅಮೆರಿಕಕ್ಕೆ ಅತಿಹೆಚ್ಚು ಪ್ರಮಾಣದಲ್ಲಿ ಹಾಳೆಚೆಟ್ಟಿ ರಫ್ತು ಮಾಡುತ್ತಿರುವ ಅಳಿಲೇಶ್ ಎಕ್ಸ್‌ಪೋರ್ಟ್ಸ್ ವೈ.ಜೇಶ್ ಲಿಮಿಟೆಡ್ ಸಂಸ್ಥೆಯ ಸ್ಥಾಪಕ ಅಳಿಲಾಶ್ ರಾವ್ ಅವರೊಂದಿಗೆ ಮಾತನಾಡಿದಾಗ, 'ಕಚ್ಚಲಲ್ಲಿರುವ ಆಡಿಕೆ ಉತ್ಪಾದನಾ ಕ್ಷೇತ್ರಕ್ಕೆ ಚೀನಾ ಸಂಶೋಧನೆ ಹೊಸ ಬೆಳಕು ತುಂಬಿದೆ ಎಂದು ಮ

ಭವಿಷ್ಯದ ಅಭಿವೃದ್ಧಿಗೆ ಸಂಶೋಧನೆ ಬುನಾದಿ

ವಿಕ ಸುದ್ದಿಲೋಕ ಬೆಂಗಳೂರು

ಕೃಷಿ ಎಂದರೆ ಕೇವಲ ಬೆಳೆ ಬೆಳೆಸುವುದು ಮಾತ್ರವಲ್ಲ ಅವಕಾಶಗಳನ್ನೂ ಬೆಳೆಸುವುದಾಗಿದೆ. ಇಂದಿನ ಸಂಶೋಧನೆಗಳು ಭವಿಷ್ಯದ ಅಭಿವೃದ್ಧಿಗೆ ಬುನಾದಿಯಾಗಿವೆ ಎಂದು ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಕೃಷಿ ಶಿಕ್ಷಣ) ಸಹಾಯಕ ಮಹಾನಿರ್ದೇಶಕ ಡಾ.ಸೀಮಾ ಜಗ್ಲಿ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಹಮ್ಮಿಕೊಂಡಿರುವ 'ಸ್ನಾತಕೋತ್ತರ ವಿಜ್ಞಾನ ಸಪ್ತಾಹ-2026' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

''ಇಂದಿನ ಯುವ ಜನತೆ ಸಂಶೋಧನೆಗಳ ಬಗ್ಗೆ ಹೆಚ್ಚು ಒತ್ತು ನೀಡಿ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವತ್ತ ಆದ್ಯತೆ ನೀಡಬೇಕು. ವಿಜ್ಞಾನ ಸಪ್ತಾಹವು ಸಂಶೋಧನೆಯ ಮೂಲಭೂತ ಹಾಗೂ ಅನ್ವಯಿಕ ಆಯಾಮಗಳಿರಡನ್ನೂ ಪರಿಚಯಿಸುವುದರ ಜತೆಗೆ ಪರಿಣಾಮಕಾರಿ ಸಂವಹನ ಕೌಶಲ ಸಾಧಿಸಲು ನೆರವಾಗುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಸಂಶೋಧನೆಗೆ ಈ ಕಾರ್ಯಕ್ರಮ ವಿಜ್ಞಾನಿಗಳಲ್ಲಿ ಹೊಸ ಆವಿಷ್ಕಾರಗಳಿಗೆ ನೆರವಾಗಲಿದೆ,'' ಎಂದು ತಿಳಿಸಿದರು.



ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಮಾತನಾಡಿ ''ವಿಜ್ಞಾನ ಕ್ಷೇತ್ರದಲ್ಲಿನ ಸಂಶೋಧನಾ ಮನೋಭಾವ, ನವೋದ್ಯಮ ಹಾಗೂ ವೈಜ್ಞಾನಿಕ ಚಿಂತನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಸಪ್ತಾಹ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮವು ವೈಜ್ಞಾನಿಕ ಮನೋಭಾವ ಬೆಳೆಸುವುದರ ಜತೆಗೆ ಸಂಶೋಧನಾ ಸಂಸ್ಕೃತಿಗೆ ಉತ್ತೇಜನ ನೀಡಿ, ಯುವ ವಿಜ್ಞಾನಿಗಳಲ್ಲಿ ಹೊಸ ಪ್ರೇರಣೆ ನೀಡುವ ವೇದಿಕೆಯಾಗಲಿದೆ,'' ಎಂದರು.

ಜು. 24 ರವರೆಗೂ ನಡೆಯಲಿರುವ ಈ ಸಪ್ತಾಹದಲ್ಲಿ 226 ಸ್ನಾತಕೋತ್ತರ ಸಂಶೋಧನಾ ಫಲಿತಾಂಶ ಪೋಸ್ಟರ್ ಹಾಗೂ 70 ಪಾಕ್ಷೋರಲ್ ಮೌಖಿಕ ಪ್ರಬಂಧಗಳನ್ನು ವಿದ್ಯಾರ್ಥಿಗಳು ಪ್ರಸ್ತುತಪಡಿಸಲಿದ್ದಾರೆ. ಡೀನ್‌ಗಳಾದ ಡಾ. ಪಿ.ವೆಂಕಟರಮಣ ಹಾಗೂ ಡಾ. ಜಯಪ್ರಕಾಶ್ ಗೌಡ ಉಪಸ್ಥಿತರಿದ್ದರು.


ಬೆಂಗಳೂರು ಕೃಷಿ ವಿವಿ ಹಮ್ಮಿಕೊಂಡಿರುವ 'ಸ್ನಾತಕೋತ್ತರ ವಿಜ್ಞಾನ ಸಪ್ತಾಹ -2026' ಕಾರ್ಯಕ್ರಮವನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮಹಾನಿರ್ದೇಶಕ ಡಾ.ಸೀಮಾ ಜಗ್ಲಿ ಉದ್ಘಾಟಿಸಿದರು. ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಉಪಸ್ಥಿತರಿದ್ದರು.

Vijaya Karnataka Pg.10

ಮದುವೆ ಮನೆಯಲ್ಲಿ ಕೀಟೊ ಮೆನು

ಭೂರಿ ಭೋಜನಗಳೇ ಪ್ರಮುಖ ಆಕರ್ಷಣೆಯಾಗಿರುವ ಭಾರತೀಯರ ಮದುವೆಗಳಲ್ಲಿ ಈಗ ಫಿಟ್ನೆಸ್ ಪ್ರಿಯರಿಗಾಗಿ ಕೀಟೊ ಆಹಾರಗಳೂ ಸರ್ವ್ ಆಗುತ್ತಿವೆ.

ಬಬಿತಾ ಎಸ್.
babitha.salian@timesgroup.com



ಒಂದೆಡೆ ಬಗ್ಗಿ ಬಗ್ಗಿ ಸಲಾಡ್, ಇನ್ನೊಂದೆಡೆ ಪೈವಿಧ್ಯಮಯ ರುಚಿಗಳ ಸ್ಯಾರ್ಟರ್ಸ್, ಮತ್ತೊಂದೆಡೆ ಬಾಯಿ ನೀರೂರಿಸುವ ಮೊಸ್ಕೋರ್ಸ್, ಡಿಸ್‌ಪ್ಲೇಯಲ್ಲೇ ಸೆಳೆಯುವ ಬಗೆ ಬಗೆಯ ಸಿಹಿ ತಿನಿಸುಗಳ ಸ್ವೀಟ್, ಐಸ್‌ಕ್ರೀಮ್...ಹೀಗೆ ಮದುವೆ ಮನೆಯ ಭೋಜನ ಪ್ರತಿಯೊಬ್ಬರಿಗೂ ಆಕ್ಟುಮುಟ್ಟು ಈಗಿನ ಆದ್ದೂರಿ ಮದುವೆ ಸಮಾರಂಭಗಳಲ್ಲಿಯಂತೂ ಮದುವೆ ಮಾಡಿಸುವವರು ಪೈಪೋಟಿಗೆ ಬಿದ್ದವರಂತೆ ಲಕ್ಷುರಿ ಮತ್ತಿನ್ನಿಂಗ್ ಮೆನುಗಳನ್ನು ಆತಿಥಿಗಳಿಗೆ ಉಣಬಡಿಸುತ್ತಿದ್ದಾರೆ. ಆದರೆ ಬಂದವರಿಗೆ ಹೊಟ್ಟೆ ತುಂಬಾ ತಿನ್ನಿ ಎನ್ನುವ ಕಾಲ ಇದಲ್ಲ. ಯಾಕೆಂದರೆ ಜನರಿಗಾ ತಮ್ಮ ಆರೋಗ್ಯ ಮತ್ತು ಫಿಟ್ನೆಸ್ ಬಗ್ಗೆ ವಿಪರೀತ ಕಾಳಜಿ ಮೆರೆಯುತ್ತಿದ್ದಾರೆ. ದೇಹ ಹೊಕ ಇಂಕಿಗೆ ಸಹಾಕರಿಯಾಗುವ, ಕೊಬ್ಬು ಕರಗಿಸುವ, ಕಿತ್ತು ಹ್ಯಾಲೊರಿ ಉಳ್ಳ ಹೀಗೆ ಅಯ್ಯ ಆಹಾರಗಳನ್ನೇ ಆರಿಸು, ತೂಗಿ ಸೇವಿಸುತ್ತಿದ್ದಾರೆ.

ಮದುಮಕ್ಕಳ ಆರೋಗ್ಯ ಕಾಳಜಿ: ಈಗಿನ ಅನೇಕ ಯುವತಿ, ಯುವಕರು, ಮದ್ವವಯಸ್ಸಿನ ಬಹುಪಾಲು ನಿಚ್ಚಕೊಂಡಿರುವ ಕೀಟೊ ಡಯಟ್ ಆಹಾರಗಳ ಮದುವೆ ಮನೆಗೂ ಕಾಲಿಟ್ಟಿದೆ. ಮುಖ್ಯವಾಗಿ ಮದುಮಕ್ಕಳು ಕೀಟೊ ಡಯಟ್ ಪ್ರಿಯರಾಗಿದ್ದರೆ ಅವರು ತಮ್ಮ ಮದುವೆಯಲ್ಲೂ ಇಂಥ ಆಹಾರವನ್ನೇ ಬಯಸುತ್ತಾರೆ. ತಮ್ಮ ಜೀವನದ ಮಹತ್ವದ ದಿನದಲ್ಲಿಯೂ ಆರೋಗ್ಯ ಕಾಳಜಿಯನ್ನು ಬಿಟ್ಟುಕೊಡದ ಅವರು ಮದುವೆ ಮನೆಗಳಲ್ಲಿ ಅವುಗಳನ್ನು ಸೇರುತ್ತಿದ್ದಾರೆ. ಈ ಮೂಲಕ ತಾವು ಮಾತ್ರವಲ್ಲದೆ, ಮದುಮಗೆ ಬಂದ ಆತಿಥಿಗಳಿಗೂ ಕೀಟೊ ಡಯಟ್‌ನ ಮಹತ್ವ ಸಾರುತ್ತಿದ್ದಾರೆ. ಸದ್ಯಕ್ಕೆ ಸಲೆಬ್ರಿಟಿ ಮದುವೆಗಳಲ್ಲಿ ಕಾಣಿಸಿಕೊಂಡಿರುವ ಈ ಫುಡ್ ಟ್ರೆಂಡ್ ಕ್ರಮೇಣ ಜನಸಾಮಾನ್ಯರ ಮದುವೆ ಊಟದಲ್ಲಿ ಜಾಗಗಿಟ್ಟಿಕೊಂಡರೂ ಆಶ್ಚರ್ಯವಿಲ್ಲ.

ವೆಲ್ಲಿಸ್ ಟ್ವಿಸ್ಟ್: ಕಳೆದ ಮಾರ್ಚ್‌ನಲ್ಲಿ ನಟಿ ಕೃತಿಕಾ ಕಮ್ರಾ ಮತ್ತು ನಿರ್ದಿಷ್ಟ ಸಲೆಬ್ರಿಟಿ ಸಿದೊಷ್ ಗೌರವ್ ಕಪ್ಲಿಂಜ್ ಮದುಮೆಯಲ್ಲಿ ಕೀಟೊ ಫ್ರೆಂಡ್ಲಿ ಆಹಾರಗಳೇ ಸೇವಿಯಾಗಿದ್ದವು. ಚಂಬಾಬ್ ಖಾದ್ ಎಂದರೆ ಸಲಾಡ್, ಜ್ಯೂಸ್‌ಗಳಿಗೆ ಸೀಮಿತ ಎಂಬ ಅಪವಾದಕ್ಕೆ ಟ್ವಿಸ್ಟ್ ನೀಡುವಂತಿತ್ತು ಈ ಕೀಟೊ ಫೀಸ್ಟ್‌ಲ್ಲಿ ಸ್ಟಾರ್ಟರ್‌ಗಳಿಂದ ಹಿಡಿದು ಮೊಸ್ಕೋರ್ಸ್ ಮತ್ತು ಸಿಹಿ ತಿಂಡಿಯೂ ಕೀಟೊ ಪದಾರ್ಥಗಳೇ ಆಗಿದ್ದವು. ಮೊಸರಿನಿಂದ ಮಾಡಿದ ಕೀಟೊ ಡಯಟ್ ಪ್ರಿಯರಿಗಾಗಿ ಮದುವೆ ಪೂರ್ವದ ಸಂಭ್ರಮಗಳಲ್ಲೂ ತಮ್ಮ ಡಯಟ್, ಫಿಟ್ನೆಸ್‌ಗಳನ್ನು ನಿರ್ಲಕ್ಷಿಸದೆ ಕಟ್ಟುನಿಟ್ಟಾಗಿ ಪಾಲಿಸಿದ್ದರು. ಮದುವೆ ದಿನವೂ ಕೀಟೊ ಖಾದ್ಯಗಳಿಗೇ ಆದ್ಯತೆ ನೀಡಿದ್ದರು. ಅವರ ಮದುವೆಯಲ್ಲಿ ಆತಿಥಿಗಳಿಗೆ ಎಂದಿನಂತೆ ಲಕ್ಷುರಿ ವೆಡ್ಡಿಂಗ್ ಮೆನುಗಳ ಜತೆಗೆ ಕೀಟೊ ಮೆನುಗಳನ್ನೂ ಸೇರಿಸಲಾಗಿತ್ತು.

ಬಗೆ ಬಗೆಯ ಖಾದ್ಯ: ಈ ಕೀಟೊ ಮೆನುವಿನಲ್ಲಿ ಮೊದಲಿಗೆ ಗ್ಲುಟೆನ್ ರಹಿತ ಮತ್ತು ಧಾನ್ಯ ಬಳಕೆದ ಫ್ಯಯಮ್ಮ ಪಿಜ್ಜಾ ಮತ್ತು ಪಿಕ್ಲ್ಸ್ ಚಿಲ್ಲಿ, ಸ್ಪಿನಚ್ ಗೊಮೆ ವಿದ್ ಸಲ್ಟೆನ್ ಟೋಲ್ಲಿ, ಎಡಮಾಮೆ ಚಿಲ್ಲಿ, ಜೀರ್ ಸಮ್, ಧಾಯಿ ಬೌಲ್, ಮೆಂತ್‌ಕೊರ್ಸ್‌ನಲ್ಲಿ ಥಾಯಿ ಫುಮೆಲೊ ಸಲಾಡ್ ಯಮ್ ಸೊಮೊ, ಟೊಲ್ಲಿಡ್ ಕೊಕೊನಟ್, ಪೀನಟ್, ಸ್ಪೈಕ್ಡ್ ಜೆಸೂರ್ ಕರ್ರಿ ವಿದ್ ಆಲ್ಮಂಡ್ ರೋಟಿ, ಕಾಲಿಫ್ಲವರ್ ರೈಸ್ ವಿದ್ ಸ್ಟೋ ಸೀಸ್ ಮತ್ತು ಲೋಬ್ಸ್ ರೂಟ್ ಯಮ್ ಮತ್ತು ಡೆಸರ್ಟ್‌ನಲ್ಲಿ ಡಾರ್ಕ್ ಚಾಕೊಲೆಟ್ ಬ್ರೂನಿ ಮತ್ತು ಎಳನೀ ಐಸ್‌ಕ್ರೀಮ್ ಸರ್ವ್ ಮಾಡಲಾಗಿತ್ತು.

ಮದುವೆ ಮನೆಗಳಲ್ಲಿ ಕೀಟೊ ಮೆನುಗಳನ್ನು ನಾನೂ ನೋಡಿದ್ದೇನೆ. ಅಲ್ಲಿ ಪ್ರತ್ಯೇಕವಾಗಿ ಕೀಟೊ ಕೌಂಟರ್, ಡಯಟ್ ಕೌಂಟರ್ ಇತ್ಯಾದಿ ಇರುತ್ತವೆ. ಈಗಿನ ಆರ್ಟಿಸ್ಟ್ ಮತ್ತು ಫಿಟ್ನೆಸ್ ಪ್ರಜ್ಞೆಯ ಜನರು ಇದನ್ನು ಟ್ರೆಂಡ್ ಮಾಡುತ್ತಿದ್ದಾರೆ. ಇಂಥ ಮೆನುವಿನಲ್ಲಿ ಪ್ರೊಟೀನ್ ಹೆಚ್ಚಿರುವ ಪನೀರ್ ಟಿಕ್ಕಾ, ಗ್ರಿಲ್ಡ್ ತರಕಾರಿಗಳು, ಚೀಸ್ ಪ್ಲೇಟ್ಸ್, ಅವಕಾಡೊ ಸಲಾಡ್, ತೆಂಗಿನಕಾಯಿ ಹಾಕಿದ ಕರಿ, ಸಕ್ಕರೆ ರಹಿತ ಸಿಹಿ ತಿಂಡಿ, ಬಾದಾಮಿ ಮತ್ತು ತೆಂಗಿನಕಾಯಿ ಹಿಟ್ಟಿನ ರೊಟಿ, ಗ್ರೀಕ್ ಸಲಾಡ್, ಬಾದಾಮಿ ಹಿಟ್ಟಿನ ಹಲ್ವಾ ಕೇಟೊ ಬ್ರೌನಿ ಇರುತ್ತವೆ.

ಪ್ರಿತಿಕಾ ಗೌಡ । ಸೆಲೆಬ್ರಿಟಿ ನ್ಯೂಟ್ರಿಷನಿಸ್ಟ್


ಆರೋಗ್ಯ ಸ್ನೇಹಿ

ಆಹಾರದಿಂದ ಆರೋಗ್ಯ ಎಂಬ ಸತ್ಯ ಒಪ್ಪಿರುವ ಜನರೀಗ ವಿವಿಧ ಡಯಟ್‌ಗಳನ್ನು ಪಾಲಿಸುತ್ತಿದ್ದಾರೆ. ಈ ಫುಡ್ ಕೀಟೊ ಡಯಟ್ ಜನಪ್ರಿಯವಾಗಿದ್ದು, ಸೆಲೆಬ್ರಿಟಿಗಳಿಂದ ಹಿಡಿದು ಜನಸಾಮಾನ್ಯರೂ ಇದನ್ನು ಅನುಸರಿಸುತ್ತಿದ್ದಾರೆ. ಅಧಿಕ ಕೊಬ್ಬಿನಂಶವಿರುವ ಮತ್ತು ಆಕ್ಸಂತ ಕಡಿಮೆ ಪ್ರಮಾಣದಲ್ಲಿ ಕಾರ್ಬೊಹೈಡ್ರೇಟ್ ಒಳಗೊಂಡ ಆಹಾರ ಸೇವನೆಯಿರುವ ಈ ವಿಧಾನದಲ್ಲಿ ದೇಹವು ಕೀಟೊಸಿಸ್ ಎಂಬ ಚಯಾಪಚಯ ಸ್ಥಿತಿಗೆ ತಲುಪಿ ಗ್ಲುಕೋಸ್‌ನ ಬದಲು ಕೊಬ್ಬನ್ನು ದಹಿಸುತ್ತದೆ. ಇದರಿಂದ ದೇಹ ತೂಕ ಸಾಕಷ್ಟು ಪ್ರಮಾಣದಲ್ಲಿ ಕರಿಮೆಯಾಗುತ್ತದೆ. ಇದನ್ನು ಸರಳವಾಗಿ ಹೇಳುವುದಾದರೆ ಕೊಬ್ಬು ಅಂದರ ಪ್ರೊಟೀನ್ ಹೆಚ್ಚಿರುವ ಮತ್ತು ಪಿಷ್ಟ ಕಡಿಮೆ ಇರುವ ಖಾದ್ಯಗಳನ್ನು ಸೇವಿಸಿ ದೇಹ ತೂಕವನ್ನು ಸಮತೋಲನದಲ್ಲಿ ಇಡುವುದಾಗಿದೆ.


Vijay Karnataka Pg.Spl.13

ರಾಷ್ಟ್ರೀಯ ಮಾವು ದಿನ

ಜಗತ್ತಿನಲ್ಲೇ ಅತಿ ಹೆಚ್ಚು ಸೇವಿಸಲ್ಪಡುವ ಹಣ್ಣುಗಳ ಪೈಕಿ ಸ್ಥಾನ ಪಡೆದಿರುವ ಮಾವಿನ ಹಣ್ಣಿನ ಉಗಮಸ್ಥಾನ ಈಶಾನ್ಯ ಭಾರತ ಮತ್ತು ಮ್ಯಾನ್ಮಾರ್ ಪ್ರಾಂತ್ಯ. ಜಗತ್ತಿನಲ್ಲೇ ಮೊದಲ ಬಾರಿ 5000 ವರ್ಷಗಳ ಹಿಂದೆಯೇ ದಕ್ಷಿಣ ಭಾರತದಲ್ಲಿ ಮಾವನ್ನು ಬೆಳೆಯಲಾಗುತ್ತಿತ್ತು. ಜುಲೈ 22ರಂದು ಮಾವಿನ ಹಣ್ಣಿನ ದಿನವನ್ನಾಗಿ ಆಚರಿಸಲಾಗುತ್ತದೆ.



Vijaya Karnataka Pg.11



Indian express Pg.18

Storage in Cauvery reservoirs stands at 52%

The Kodagu region, that forms the biggest catchment area for Cauvery besides being the point of origin for the river, has reported a shortage of 45%

B.S. Satish Kumar
BENGALURU

The Cauvery Water Management Authority (CWMA), which is the apex body that monitors implementation of Cauvery water release to lower riparian States as per the Supreme Court's verdict, is meeting in Delhi on Wednesday to review the situation.

This meeting has assumed importance as it comes at a time when the catchment areas in Karnataka's Cauvery basin are facing deficit rainfall.

While the entire State is facing a rainfall deficit of about 35%, the Kodagu region that forms the biggest catchment area for the Cauvery besides being the point of origin for the river, has reported a shortage of 45%.

Rainfall deficit in Kodagu will have serious impact on the southern part of the State that depends on Cauvery water.

The cumulative storage in the four reservoirs in Karnataka's Cauvery basin - Harangi, Hemavati, KRS and Kabini - accounts for just 52% of their full storage capacity as of now. Of this, the storage at KRS is particularly poor as it accounts for a mere 35% of its full capacity.

The inflows too are poor as KRS reported inflows of 775 cusecs on July 21.

The Karnataka government has already declared that it would not release water for irrigation purposes and that whatever storage is there in the reservoirs has to be used only for drinking purposes.

The deficit rainfall resulting in poor storage has come in the way of adhering to the stipulated quota of release of Cauvery water to Tamil Nadu as per the Supreme Court's directive.

It is being said that only 3.4 tmcft of water has been released by Karnataka to Tamil Nadu from June 1 to July 19 as per the measurement at Biligundlu measuring gauge as against the stipulated quantum of 28.3 tmcft.

Speaking to *The Hindu*, Karnataka Water Resources Minister Ramalinga Reddy said, "In view of drought, we have decided to use the water stored in reservoirs of the Cauvery basin only for drinking water requirements."

Rainfall deficit in Kodagu will have serious impact on the southern part of the State

Monsoon key

Meanwhile, weather experts are concerned over deficit rainfall under southwest monsoon in Karnataka. Pointing out that the southwest monsoon is the mainstay of the State's weather system as it accounts for nearly 75% of the calendar year's rainfall, they say that if the monsoon continues to be poort, the State would face a crisis.

The Karnataka Cabinet that met a few days ago under the chairmanship of Chief Minister D. K. Shivakumar has decided to submit a memorandum to the Centre in about 15 days seeking declaration of drought.

The Wednesday's meeting of CWMA comes close on the heels of the meeting by the Cauvery Water Regulation Committee (CWRC) that took stock of the issue.

In its earlier meeting held on June 23, the CWMA had directed the basin States to make judicious use of water available in reservoirs, particularly for drinking water needs.

Water issues in Karnataka

	Storage in TMCft			July 21, 2026	
	Gross capacity	Storage on July 21, 2025	% of present storage	Daily inflow (in cusecs)	Daily outflow (in cusecs)
Harangi	8.50	6.60	78	3,846	180
Hemavathi	37.10	22.69	61	1,399	300
KRS	49.45	17.41	35	775	2,391
Kabini	19.52	12.80	66	3,330	500
Cauvery Basin	114.57	59.49	52	8,870	2,891

The Hindu Pg.07

Pg.3

Muscle loss is hitting Indians in 40s, diet & diabetes key factors

Sarcopenia is no longer just a geriatric problem, and we must know to distinguish between weight & muscle loss

Kamini.Mathai@timesofindia.com

What walks on four legs in the morning, two at noon, and three in the evening? The answer to this ancient Greek riddle of the Sphinx is 'man', the third leg a cane used for support as one grows old. It's possibly one of the earliest references to loss of muscle with age, known today as sarcopenia.

It's as old as ageing but the term sarcopenia (meaning 'poverty of muscle') was coined in 1989 by Dr Irwin Rosenberg and officially recognised as a disease in 2016. Ten years on, the Geriatric Society of India has released the country's first "guidelines for evaluation and management of sarcopenia" to help doctors detect and treat muscle loss early before it leads to falls, disability and loss of independence.

Muscle overlooked

"For the past several decades, medical science focused on bone health, the rise in osteopenia and osteoporosis," says Dr O P Sharma, internal medicine specialist at Indraprastha Apollo Hospitals, Delhi, who curated the guidelines. "We never paid attention to the muscle attached to it, and are now paying the price."

More so, say doctors, as sarcopenia, thought to have been associated with older adults, is now showing up in younger folk. "Earlier, sarcopenia affected just 4% of younger adults. Our latest research from a 1,000-plus community cohort with an average age of 47 in a Kerala Diabetes Prevention Programme shows a prevalence of 36%," says Dr Nitin Kapoor, professor and head of endocrinology, diabetes and metabolism (Unit 1) department at Christian Medical College, Vellore.

While older adults exhibit primary sarcopenia, which is age-related, younger people have secondary sarcopenia, caused by steroid abuse (with native medicines), chronic organ failure and neuro-muscular disorders, says Dr Kapoor, who has published studies on it. "The third common cause is diabetes, which we are increasingly seeing in younger people. Insulin, an anabolic hormone, helps build muscle, fat and other tissues. In Type 1 diabetes, there's no insulin, and hence, significant muscle breakdown. In Type 2, even though levels may be high, there is insulin resistance and the hormone is not able to work the way it should. So, there is increased catabolism, which leads to muscle loss." It doesn't help that we are a carb-loving, predominantly vegetarian nation "conditioned to enjoy foods rich in oil, salt and sugar", says Dr Sharma. "We hardly look at protein-rich foods. It's a recipe for sarcopenia."

A carb-loving, 76-year-old vegetarian, Dr Sharma now follows a sarcopenia prevention plan. He sleeps seven hours a day (to allow the body to repair muscle), exercises every morning, walks in the sun for 15 minutes after lunch (to get his Vitamin D levels up), drinks a glass of milk and eats dal twice a day (trying out varieties from every state in India to keep meals interesting), and includes protein-packed seeds and one fibre-rich fresh fruit in his meals. "I keep physically and mentally active, and think positive."

The third, he says, is important as there is a bidirectional cycle between sarcopenia and depression. Sarcopenia leads to physical frailty, which limits social interaction and can contribute to depression. Conversely, depression and weakness discourage physical activity, which accelerates muscle loss.

Weight-loss drugs also a factor

New anti-obesity drugs help people lose fat, but about 20% of the weight loss may also come from muscle, says Dr Kapoor. "The drugs themselves are not harmful to muscles, and weight loss can improve mobility and strength. But doctors must advise patients on preserving muscle through protein intake and strength training while on medication." He adds that some of the muscle loss seen on the scans of those on the drugs may actually reflect fat within the muscle. "But this is still a hypothesis."

Aesthetic physician Dr Aishwarya Selvaraj says she is seeing a growing number of patients seeking treatment for a prematurely aged appearance after rapid weight loss. "People forget the face is made of not just skin, but fat, muscle and connective tissue. When volume is lost quickly, the skin sags," adds the Chennai-based founder of Ri-

Sarcopenia and depression reinforce each other: muscle loss reduces activity and social contact, while depression accelerates further decline

crevive. "I can help improve skin quality and firm it with ultrasound treatments and microneedling, but none can help as much as strength training. It's key to preventing muscle loss."

Walking is not enough

But it's the first step, says Dr Kapoor. "When it comes to prevention and treatment, there are three broad pillars." The first is diet. "We recently conducted a nationwide study to find terribly low protein intake among Indians, only 0.7-0.8g of protein per kg of body weight per day. The first thing we need to do is increase protein intake to the recommended 1g per kg of body weight."

The second is exercise. "For most, exercise is only aerobic — walking or running. What we really need for muscle protection is resistance training." The third is medication. "Maintaining adequate calcium and vitamin D is important for musculoskeletal health. Newer drugs such as myostatin inhibitors are showing promise. They are being evaluated in clinical trials, especially in combination with anti-obesity drugs, to determine whether they can reduce muscle loss," says Dr Kapoor.

So, here's the question: Build on the three pillars today or lean on a third leg tomorrow? This one's no riddle.

WHAT ARE THE SIGNS?

1. Feeling weak, more tired, looking frail, like one has aged
2. Frequently dropping things owing to poor grip
3. Difficulty climbing stairs, slower walking speed
4. Balance poor, not being able to stand without leaning for support
5. Being prone to falls



SARCOPENIA TESTS

Handgrip strength: Squeeze a hand dynamometer as hard as possible for 3-5 seconds. Low grip strength (<28kg in men & <18kg in women) is early sign of probable sarcopenia

Chair sit-to-stand test: Stand and sit five times in less than 15 seconds

Gait speed: 6-metre walk @ 1 metre per second

Calf circumference: Lower than 32cm cut for women & 34cm for men suggests sarcopenia

DEXA scan: Used to check bone density, also assesses muscle mass

EXERCISE

- Focus on flexibility, joint mobility. Add balance training to improve stability
- Brisk walking, or cycling build endurance, heart health
- Add resistance training with weights, bands or body-weight exercises to build, preserve muscle mass. Even 15 mins of 1-2-3 times a week is good enough

MIND YOUR HABITS FOR MORE MUSCLE

- **Diet:** Up protein intake to 1g/kg of ideal weight, vit D to prevent tissue breakdown, vit B12 to maintain nerve health for muscle contraction
- **Sleep:** 7 hours daily for muscle repair
- **Overall health:** Sarcopenia linked to diabetes, kidney disease, heart failure, depression

Each GLP-1 drug has its own benefit, and side effect

Meta-analysis of 262 clinical trials (close to 1 lakh people) published in BMJ looked at the most commonly used weight-loss drugs to find each one had its distinct advantages & disadvantages. A look.



How top five drugs fared:

1 Tirzepatide (Mounjaro)

Pros: Highest average weight loss after one year, at **14.9%**

- Cut total fat mass by **25.7%**
- Cut heart failure risk by **51%**

Cons: Caused highest loss of lean muscle mass, at **8.3%**

- Higher rates of side effects and treatment discontinuation

2 Cagrilintide-Semaglutide (CagriSema)

- **Pro:** Second-highest weight loss after a year, at **14.8%**
- **Con:** Elevated rates of gastrointestinal side effects and treatment discontinuation

3 Oral Semaglutide

Pro: Average weight loss of **10.9%** after one year

Con: Higher weight loss efficacy meant more side effects, resulting in increased patient discontinuation

4 Orforglipron

- Average weight loss of **9.9%** after a year

5 Subcutaneous Semaglutide (Wegovy)

Pros: Average weight loss of **9.6%** after a year

- Lowered the risk of heart failure by **57%**
- Only drug linked to reduced risk of death from any cause, at **19%**
- Cut heart attack risk: **28%**
- Slowed kidney disease progression by **20%**

> The findings highlight that while evidence for weight loss is strong, evidence for longer term outcomes is still developing and differs considerably between individual medications
>
> **Marie Spreckley,** WEIGHT MANAGEMENT RESEARCHER, CAMBRIDGE UNIVERSITY

What study shows:

- Weight loss didn't last after treatment stopped. Other health benefits also bound to medication timeline
- None showed much improvement in quality-of-life scores at one-year mark
- Drugs that shed most weight also hardest on body, causing GI distress, severe fatigue, muscle loss

Source: BMJ journals

'Weight loss is only an intermediate goal of GLP-1 drugs'

TOI spoke to **Dr Nikhil Tandon,** head of endocrinology & metabolism, AIIMS Delhi, who helped develop the WHO global guidelines on GLP-1 use. Here's what he had to say about the drugs:

- **Good for avoiding surgery:** GLP-1 drugs (semaglutide & tirzepatide) are a safer alternative to bariatric surgery, and older weight-loss drugs that had high mental health damage risk
- **Back it with diet:** Lasting success needs a solid foundation of diet and physical activity, without which patients are susceptible to rapid weight rebound if they stop treatment
- **BP, sugar the real target:** Medically, weight loss is an intermediate milestone rather than the endpoint. The primary objective (highlighted by WHO guidelines) is lowering blood pressure, managing blood sugar, and reducing heart complications and mortality
- **Can't be popped casually:** These drugs have common side effects and individual tolerances vary, so they must be managed by a healthcare professional and not taken casually
- **What are you losing?** It's still unclear whether weight lost includes more lean muscle mass or a safer mix of muscle-fat & adipose tissue
- **Tolerance may be below dose:** A patient's maximum tolerated dose may be lower than max prescribed dose, altering results. Early data suggests those with diabetes may lose slightly less weight than others

> **Studies of this size give us a good overarching umbrella assessment of what's happened, but they need granularity. How Indians respond to GLP-1 and how an American will may not be quite the same**

TIMES NATION

Times of India Pg.10